ನಗರ ಸಭೆಗೆ ಬಿಡುಗಡೆಯಾದ ಅನುದಾನವನ್ನು ವರ್ಗಾಯಿಸಿರುವುದು

29 (65) ಶ್ರೀ ಪುಟ್ಟರಂಗ ಶೆಟ್ಟಿ (ಚಾಮರಾಜನಗರ): ಮಾನ್ಯ ನಗರಾಭಿವೃದ್ಧಿ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 2010–11ನೇ ಸಾಲಿನಲ್ಲಿ ರಾಜ್ಯದ ನಗರಸಭೆಯ ಸಂಸ್ಥೆಗಳಿಗೆ ಎಸ್.ಎಫ್.ಸಿ ಅನುದಾನದಡಿಯಲ್ಲಿ 2500 ಲಕ್ಷಗಳ ವಿಶೇಷ ಅನುದಾನವನ್ನು ನಿಗಧಿಗೊಳಿಸಿರುವುದು ನಿಜವಲ್ಲವೆ;

ಆ) ಅದರಲ್ಲಿ ಚಾಮರಾಜ ನಗರ ಸಭೆಯ ಅಭಿವೃದ್ಧಿಗೆ 25 ಕಾಮಗಾರಿಗಳಿಗೆ ರೂ.12.10 ಕೋಟಿ ಅನುದಾನವನ್ನು ನಿಗಧಿಗೊಳಿಸಿದ್ದು, ಅದರಲ್ಲಿ ರೂ.5.00 ಕೋಟಿ ಹಣವನ್ನು ಬಿಡುಗಡೆಗೊಳಿಸಿರುವುದು ನಿಜವಲ್ಲವೆ;

ಇ) ಏಕಾಏಕಿ ಚಾಮರಾಜನಗರ ನಗರಸಭೆಯ ಬದಲಾಗಿ, ಚಾಮರಾಜ ಕ್ಷೇತ್ರ (ಮೈಸೂರು) ವರ್ಗಾಯಿಸಲು ಕಾರಣವೇನು?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಬೆಂಗಳೂರು ಜಲಮಂಡಳಿ ಸಚಿವರು):–

ಅ) ಹೌದು

ಆ) ಮತ್ತು ಇ) ಸರ್ಕಾರದ ಆದೇಶ ಸಂಖ್ಯೆ:ನಅಇ 41 ಎಸ್ಎಫ್ಸಿ 2010(ಪಿ) ದಿನಾಂಕ:25–11–2010ರಲ್ಲಿ ಕಣ್ತಪ್ಪಿನಿಂದಾಗಿ ಚಾಮರಾಜ ಕ್ಷೇತ್ರ ಮೈಸೂರು ಮಹಾನಗರಪಾಲಿಕೆ , ಎಂಬುದರ ಬದಲಾಗಿ ಚಾಮರಾಜ ನಗರ ಯೆಂದಾಗಿದ್ದುದರಿಂದ, ಕೂಡಲೆ ಸರ್ಕಾರದ ಆದೇಶ ಸಂಖ್ಯೆ:ನಅಇ 41 ಎಸ್ಎಫ್ಸಿ 2010(ಪಿ) ದಿನಾಂಕ:03–12–2010ರಲ್ಲಿ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿದೆ. ಚಾಮರಾಜ ಕ್ಷೇತ್ರ, ಮೈಸೂರು ಮಹಾನಗರಪಾಲಿಕೆ, ಇವರಿಗೆ ಒಟ್ಟು ರೂ.12.10 ಕೋಟಿಗಳ ಅನುದಾನವು ನಿಗಧಿಯಾಗಿದ್ದು, ಅದರಲ್ಲಿ ರೂ.5.00 ಕೋಟಿಗಳು ಬಿಡುಗಡೆಯಾಗಿದೆ.